## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s Bangalore solar Power Pvt. Ltd., ರವರಿಗೆ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಸೋಮಲಿಂಗದಹಳ್ಳಿ ಗ್ರಾಮದಲ್ಲಿ 22 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಪಾರ್ಕ್‌ನ್ನು ಸ್ಥಾಪಿಸಲು ನಿರಾಕ್ಷೇಪಣೆ ನೀಡುವ ಕುರಿತು.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಏಕ ಕಡತ ಪದ್ಧತಿಯಡಿ ಸಲ್ಲಿಸಿರುವ ಕಡತ ಸಂಖ್ಯೆ: 606-(ಎಸ್‌ಜಿ).

* * *

**ಪ್ರಸ್ತಾವನೆ :-**

M/s Bangalore solar Power Pvt. Ltd., ರವರಿಗೆ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಸೋಮಲಿಂಗದಹಳ್ಳಿ ಗ್ರಾಮದಲ್ಲಿ 22 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಪಾರ್ಕ್‌ನ್ನು Private Solar Park Category ಅಡಿ ಸ್ಥಾಪಿಸಲು ಅನುಮತಿ ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಯೋಜನೆಯ ಸ್ಥಳದ ವಿವರಗಳು ಮತ್ತು ಈ ಕೆಳಕಂಡ ಮಾಹಿತಿಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಏಕ ಕಡತ ಪದ್ಧತಿಯಡಿ ಮೇಲೆ ಓದಲಾದ ಕಡತದಲ್ಲಿ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

| | | |
|---|---|---|
| ಯೋಜನಾ ಪ್ರದೇಶದ ವಿವರ | : | ಜಿಲ್ಲೆ : ಕಲಬುರಗಿ<br>ತಾಲ್ಲೂಕು : ಚಿಂಚೋಳಿ<br>ಗ್ರಾಮ: ಸೋಮಲಿಂಗದಹಳ್ಳಿ |
| ಯೋಜನಾ ಪ್ರದೇಶದ ಜಮೀನಿನ ವಿವರ | : | ಖಾಸಗಿ |
| ಯೋಜನಾ ಪ್ರದೇಶದ ಸಮೀಪದ ಸಬ್-ಸ್ಟೇಷನ್ ವಿವರ | : | ಚಿಂಚೋಳಿ |
| CIN ಸಂಖ್ಯೆ | : | U40300KA2017PTC103947 |
| ನಿಗದಿತ ಶುಲ್ಕ ಪಾವತಿಸಲಾಗಿದೆಯೇ | : | ಅರ್ಜಿ ನೋಂದಣಿ ಶುಲ್ಕ ಪಾವತಿಸಿದೆ |

M/s Bangalore solar Power Pvt. Ltd., ರವರಿಗೆ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಸೋಮಲಿಂಗದಹಳ್ಳಿ ಗ್ರಾಮದಲ್ಲಿ 22 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಪಾರ್ಕ್‌ನ್ನು Private Solar Park Category ಅಡಿ ಸ್ಥಾಪಿಸಲು ಅನುಮತಿ ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಇಎನ್ 543 ಎನ್‌ಸಿಇ 2017,**
**ಬೆಂಗಳೂರು, ದಿನಾಂಕ: 12.12.2017.**

M/s Bangalore solar Power Pvt. Ltd., ರವರಿಗೆ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಸೋಮಲಿಂಗದಹಳ್ಳಿ ಗ್ರಾಮದಲ್ಲಿ 22 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಪಾರ್ಕ್‌ನ್ನು Private Solar Park Category ಅಡಿ ಸ್ಥಾಪಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ **ನಿರಾಕ್ಷೇಪಣೆಯನ್ನು** ನೀಡಲಾಗಿದೆ.

1. M/s Bangalore solar Power Pvt. Ltd., ರವರು ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಪರವಾನಿಗೆ/ಅನುಮತಿ/ಅನುಮೋದನೆಗಳನ್ನು ಸಂಬಂಧಿಸಿದ ಇಲಾಖೆಗಳ /ಸಂಸ್ಥೆಗಳ/ಸಕ್ಷಮ ಪ್ರಾಧಿಕಾರಗಳಿಂದ ಪಡೆದುಕೊಳ್ಳತಕ್ಕದ್ದು;

....2)

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಬೆಂಗಳೂರು
ಸಂ. 4554
ದಿನಾಂಕ 15/12/17
MD KREDL
GM (Tech) KREDL

2. M/s Bangalore solar Power Pvt. Ltd., ರವರು ಸೌರ ನೀತಿ 2014-21 ರನ್ವಯ ಈ ಬಾಬ್ತು ಅನ್ವಯಿಸುವ ಶುಲ್ಕ ಹಾಗೂ ಇತರ ಪಾವತಿಗಳನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸತಕ್ಕದ್ದು;
3. ಪ್ರಸ್ತಾಪಿತ ಸೋಲಾರ್ ಪಾರ್ಕ್‌ನಲ್ಲಿ ಉತ್ಪತ್ತಿಯಾಗುವ ವಿದ್ಯುತ್ತನ್ನು ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಕೆ.ಇ.ಆರ್.ಸಿ.ಯ ನಿಯಮಗಳನ್ವಯ ಅಭಿವೃದ್ಧಿದಾರರು ಸ್ವಂತಕ್ಕೆ ಬಳಸಿಕೊಳ್ಳಲು ಅಥವಾ ಮೂರನೇ ವ್ಯಕ್ತಿಗೆ ಮಾರಾಟ ಮಾಡಲು (Third party sale) ಅನುಮತಿಸಿದೆ;
4. M/s Bangalore solar Power Pvt. Ltd.,ರವರು ಪ್ರಸ್ತಾಪಿತ ಪಾರ್ಕ್ ಸ್ಥಾಪಿಸಲು ಅಗತ್ಯವಿರುವ ಜಮೀನನ್ನು ಕರ್ನಾಟಕ ಭೂ-ಸುಧಾರಣೆ ಕಾಯ್ದೆಯನ್ವಯ ಖರೀದಿಸತಕ್ಕದ್ದು ಮತ್ತು ಸದರಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಕೊಂಡ ನಂತರವೇ ಸೌರ ವಿದ್ಯುತ್ ಪಾರ್ಕ್‌ನ್ನು ಸ್ಥಾಪಿಸತಕ್ಕದ್ದು;
5. M/s Bangalore solar Power Pvt. Ltd., ರವರು ಸೌರ ನೀತಿ 2014-21 ರ ಪ್ರಕಾರ ಅನ್ವಯವಾಗುವ ಸಂಸ್ಕರಣಾ ಶುಲ್ಕವನ್ನು (Facilitation fee) ಹಂಚಿಕೆಯ ಆದೇಶದ ದಿನದಿಂದ 15 ದಿನಗಳೊಳಗಾಗಿ ಕೆ.ಆರ್.ಇ.ಡಿ.ಎಲ್. ಸಂಸ್ಥೆಗೆ ಪಾವತಿಸತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆಯ ಆದೇಶವು ತಂತಾನೇ ರದ್ದಾಗುವುದು;
6. M/s Bangalore solar Power Pvt. Ltd., ರವರು ಸ್ಥಾಪಿಸುತ್ತಿರುವ ಸೌರ ವಿದ್ಯುತ್ ಪಾರ್ಕ್‌ಗೆ ಸರ್ಕಾರದ 2014-21 ರ ಸೋಲಾರ್ ನೀತಿ ಹಾಗೂ ಸರ್ಕಾರದ 2014-19 ರ ಕೈಗಾರಿಕಾ ನೀತಿಗಳ ಪ್ರಕಾರ ಅನ್ವಯವಾಗುವ ಸವಲತ್ತುಗಳು ಲಭ್ಯವಾಗುತ್ತವೆ;
7. ಪ್ರಸ್ತಾಪಿತ ಸೌರ ವಿದ್ಯುತ್ ಪಾರ್ಕ್‌ನ್ನು ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ 18 ತಿಂಗಳೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ರದ್ದು ಮಾಡುವ/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,

**ಇವರಿಗೆ:**
ಸಂಕಲನಕಾರರು, ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.

**ಪ್ರತಿ:**

1 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-1.

2 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.

3 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ.82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.

4 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.

5 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ.39, 'ಶಾಂತಿಗೃಹ', ಭಾರತ್ ಸ್ಕೌಟ್ಸ್ & ಗೈಡ್ಸ್ ಬಿಲ್ಡಿಂಗ್, ಅರಮನೆರಸ್ತೆ, ಮಹಾರಾಣಿ ಕಾಲೇಜಿನ ಹಿಂಭಾಗ, ಬೆಂಗಳೂರು-1.

...3)

6 ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ.
7 ಉಪ ಅರಣ್ಯ ಸಂರಕ್ಷಣಾಧಿಕಾರಿ ಕಲಬುರಗಿ ಜಿಲ್ಲೆ, ಕಲಬುರಗಿ.
8 ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
9 M/s Bangalore solar Power Pvt. Ltd., # 1214, 18th "C" Main, 5th Block, Rajajinagar, (Behind O G Variyar bakery), West of chord road, Bangalore-560010.
10 ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
11 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
12 ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13 ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.